# ಕರ್ನಾಟಕ ವಿಧಾನ ಪರಿಷತ್ತು

## ಲಘು ಪ್ರಕಟಣೆ – ಭಾಗ 2

**(ಸಾಮಾನ್ಯ ಮಾಹಿತಿ)**

## ಬುಧವಾರ, 24ನೇ ಮಾರ್ಚಿ, 2021

---

**ಸಂಖ್ಯೆ : 36**

ಕೇಂದ್ರ ಮೋಟಾರು ವಾಹನಗಳ ನಿಯಮಗಳು, 1989ರ ನಿಯಮ 59 ಮತ್ತು 51 ಹಾಗೂ Emblems and Names (Prevention of improper Use) Act,1950 ಕಲಂ 3,4, ಮತ್ತು 5ರನ್ವಯ ವಾಹನಗಳ ನೋಂದಣಿ ಫಲಕಗಳ ಮೇಲೆ ಅನಧಿಕೃತವಾಗಿ ಹೆಸರುಗಳನ್ನು, ಚಿಹ್ನೆ/ಲಾಂಛನಗಳನ್ನು ಹಾಗೂ ಇತರೆ ಸಂಘ ಸಂಸ್ಥೆಗಳ ಹೆಸರುಗಳನ್ನು ಹಾಕಿಕೊಳ್ಳುವುದು ಕಾನೂನು ಬಾಹಿರವಾಗಿದ್ದು, ಅಂತಹ ಫಲಕಗಳನ್ನು ತೆರವುಗೊಳಿಸುವಂತೆ ಸಾರಿಗೆ ಇಲಾಖೆಯು ಪ್ರಕಟಣೆ ನೀಡಿತ್ತು.

ಆದರೂ ಅಂತಹ ಅನಧಿಕೃತ ನೋಂದಣಿ ಫಲಕಗಳನ್ನು ಪ್ರದರ್ಶಿಸಿಕೊಂಡು ರಸ್ತೆಯಲ್ಲಿ ಓಡಾಡುವಂತಹ ವಾಹನಗಳನ್ನು ಗಮನಿಸಿರುವ ಕರ್ನಾಟಕ ಮಾನ್ಯ ಉಚ್ಚ ನ್ಯಾಯಾಲಯವು ಪ್ರಕರಣ ಸಂಖ್ಯೆ CRLP No. 1850/2017 ದಿನಾಂಕ22-01-2020ರ ವಿಚಾರಣೆಯಲ್ಲಿ ಮಾನ್ಯ ಚುನಾಯಿತ ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರು ತಮ್ಮ ಖಾಸಗಿ ವಾಹನಗಳ ಮೇಲೆ ಯಾವುದೇ ಹೆಸರು, ಚಿಹ್ನೆ, ಲಾಂಛನ ಹಾಗೂ ಸಂಘ ಸಂಸ್ಥೆಗಳ ಹೆಸರುಗಳನ್ನು ಹಾಕಿಕೊಳ್ಳುವುದನ್ನು ನಿರ್ಬಂಧಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಮಾನ್ಯ ಸಭಾಪತಿಯವರನ್ನು ಕೋರುವ ಮೂಲಕ ಈ ಕೆಳಕಂಡಂತೆ ಆದೇಶ ನೀಡಿರುತ್ತದೆ.

> **" Hon'ble Speaker of the Karnataka Legislative Assembly and the Hon'ble Chairman of the Legislative Council are hereby requested to pass on the information amongst the Members calling upon them not to use such names of the Offices on their private vehicles"**

ಆದಕಾರಣ ಮಾನ್ಯ ಸದಸ್ಯರು ತಮ್ಮ ಖಾಸಗಿ ವಾಹನಗಳ ನೋಂದಣಿ ಫಲಕಗಳ ಮೇಲೆ ಹೆಸರು, ಚಿಹ್ನೆ ಫಲಕಗಳನ್ನು ಹಾಕಿದ್ದಲ್ಲಿ ಕೂಡಲೇ ತೆರವುಗೊಳಿಸಬೇಕೆಂದು ಹಾಗೂ ಇನ್ನು ಮುಂದೆ ಅಂತಹ ಅನಧಿಕೃತ ಚಿಹ್ನೆ ಫಲಕಗಳನ್ನು/ಹೆಸರುಗಳನ್ನು ನೋಂದಣಿ ಫಲಕಗಳ ಮೇಲೆ ಹಾಕಿಕೊಳ್ಳಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ**

**ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರಿಗೆ**